ದಿನಾಂಕಃ 24-02-2023
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆ:- ವಾದಿ ಪರ ವಕೀಲರಿಂದಃ

ನಾನು ಈ ದಾವೆಯಲ್ಲಿ ವಾದಿಯಾಗಿದ್ದು. ನಾನು ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಬರೆದ ಎಲ್ಲಾ ಸಂಗತಿಗಳು ಸರಿ ಇದೆ. ಅದರಲ್ಲಿ ಇರುವ ರುಜು ನನ್ನ ರುಜುವಾಗಿದೆ.

ಸಾಕ್ಷಿಯು ಹಾಜರುಪಡಿಸಿದ, ಪ್ರತಿವಾದಿಯರು ಸಾಕ್ಷಿಗೆ ಬರೆದುಕೊಟ್ಟಿರುವ ಸ್ವಾಧೀನರಹಿತ ನೋಂದಾಯಿತ ಕ್ರಯದ ಕರಾರು ಪತ್ರವನ್ನು ನಿಪಿ.1 ಎಂದು ಗುರುತಿಸಲಾಯಿತು. ಸಾಕ್ಷಿಯು ನಿ.ಪಿ.1 ರಲ್ಲಿರುವ ಮಂಜಮ್ಮರವರ ಸಹಿಯನ್ನು ನೋಡಿ ಗುರುತಿಸಿದ್ದು , ಅದನ್ನು ನಿ.ಪಿ.1(ಎ) ಎಂದು, ಸಾಕ್ಷಿಯು ನಿ.ಪಿ.1 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು. ನಿ.ಪಿ.1 ಕ್ಕೆ ಮೂರು ಜನ ಸಾಕ್ಷಿದಾರರು ಸಹಿ ಮಾಡಿರುತ್ತಾರೆ. ಸಾಕ್ಷಿಯು ದೊಡ್ಡಯ್ಯರವರ ಸಹಿಯನ್ನು ನೋಡಿ ಗುರುತಿಸಿದ್ದು , ಅದನ್ನು ನಿ.ಪಿ.1(ಸಿ) ಎಂದು , ಮಂಜುನಾಥರವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯವರ ಸಹಿಯನ್ನು ನಿ.ಪಿ.1(ಡಿ) ಎಂದು, ಆರ್ ಜಯಚಂದ್ರರವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿಯವರ ಸಹಿಯನ್ನು ನಿ.ಪಿ.1(ಇ) ಎಂದು ಗುರುತಿಸಲಾಯಿತು. ನಿ.ಪಿ.1 ನ್ನು ಪತ್ರ ಬರಹಗಾರರಾದ ನಾಗೇಂದ್ರವರು ಬರೆದಿರುತ್ತಾರೆ. ಸಾಕ್ಷಿಯು ಸದರಿ ನಾಗೇಂದ್ರರವರ ಸಹಿಯನ್ನು ನೋಡಿ ಗುರುತಿಸಿದ್ದು, ಅವರ ಸಹಿಯನ್ನು ನಿ.ಪಿ.1(ಇ) ಎಂದು ಗುರುತಿಸಲಾಯಿತು.

1 ನೇ ಪ್ರತಿವಾದಿಗೆ ಕಳುಹಿಸಿದ ದಿನಾಂಕಃ 21-9-2020 ರ ನೋಟೀಸಿನ ಕಚೇರಿ ಪ್ರತಿಯನ್ನು ನಿ.ಪಿ.2 ಎಂದು ಗುರುತಿಸಲಾಯಿತು. 1 ಮತ್ತು 2 ನೇ ಪ್ರತಿವಾದಿಗೆ ಕಳುಹಿಸಿದ ದಿನಾಂಕಃ

09.11.2020 ರ ನೊಟೀಸಿನ ಕಚೇರಿ ಪ್ರತಿಯನ್ನು ನಿ.ಪಿ.3 ಎಂದು, ಮೂರು ಅಂಚೆ ರಶೀತಿಗಳನ್ನು ನಿ.ಪಿ.4 ರಿಂದ 6 ಎಂದು ಗುರುತಿಸಲಾಯಿತು. ನೋಟೀಸು ಜಾರಿಯಾಗದೇ ಹಿಂದಿರುಗಿದ ಎರಡು ಅಂಚೆ ಲಕೋಟೆಗಳನ್ನು ನಿ.ಪಿ.7 ಮತ್ತು 8 ಎಂದು, ಸದರಿ ಅಂಚೆ ಲಕೋಟೆಗಳಲ್ಲಿರುವ ನೋಟೀಸಿನ ಪ್ರತಿಗಳನ್ನು ನಿ.ಪಿ.7(ಎ) ಮತ್ತು ನಿ.ಪಿ.8(ಎ) ಎಂದು ಗುರುತಿಸಲಾಯಿತು. ಒಂದು ಅಂಚೆ ಸ್ವೀಕೃತಿಯನ್ನು ನಿ.ಪಿ.9 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ವಾದಿ ಪರ ವಕೀಲರ ವಿನಂತಿ ಮೇರೆಗೆ**
**ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಶಿರಾ.